## ಫಾರೆಸ್ಟ್ ಇಲಾಖೆ.

### ನೋಟಿಸ್.

ತಾರೀಖು 13ನೆ ಏಪ್ರಿಲ್ 1904ನೆ ಇಸವಿ.

1900ನೆ ಇಸವಿ ಫಾರೆಷ್ಟ್ ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ಸಾಗುವಾನಿ ಮತ್ತು ಬೀಟಿ ಮರಗಳು ಹೋದವರುಷ ಕಬಿಲಾನದಿಮೇಲೆ ತೇಲಿಕೊಂಡುಬಂದವುಗಳು ಹೆಗ್ಗಡದೇವನಕೋಟೆ ರೇಂಜ್ ಆಫಿಸರವರ ಚಾರ್ಜಿನಲ್ಲಿರುತ್ತವೆ. ಇದರ ಹಕ್ಕುದಾರರು ಯಾರಾದರೂ ಇದ್ದಲ್ಲಿ ಸದರಿ ಮರಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯತು ಒಂದು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಷ್ಟ್ ಆಫಿಸರವರಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ಮರಗಳ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರ್ಕಾರಕ್ಕೆ ಬಳವಡಿಸಿಕೊಳ್ಳುವುದು.

ಸದರಿ ನಾಟಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರ ಪಡಿಸಿದ್ದಕ್ಕೆ ತಗಲಿದ ಲಾಗವಡನ್ನು ಫಾರೆಷ್ಟ್ ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ:—

| ನಂಬರು. | ತೊಲೆ ವಿವರ. | ಗುರ್ತು. | ಲಾಂಬಿ. | | ಸುತ್ತು. | ಸಲೆ ಅಡಿ. |
|---|---|---|---|---|---|---|
| | | | ಅಡಿ. | ಇಂಚ್. | | |
| 1 | ಸಾಗುವಾನಿ ನಾಟ.. | 92ನೆ ನಂಬರು ತೊಲೆ. ಇಟ್ನಹಳ್ಳಿ ಕಾಡಿನಲ್ಲಿ ಬಿದ್ದಿದೆ. | 13 | 9 | 6′—6″ | 35 |
| 2 | ಬೀಟೆ ನಾಟ .. | ಯಾವ ಗುರ್ತು ಮರದಮೇಲೆ ಇರುವದಿಲ್ಲ. ಪಟೇಲರ ಸ್ವಾಧೀನದಲ್ಲಿ ಕಿತ್ತೂರು ಗ್ರಾಮದಲ್ಲಿ ಬಿದ್ದಿರುತ್ತೆ. | 17 | 0 | 3′— 0″ | 10 |

1904ನೆ ಇಸವಿ ಏಪ್ರಿಲ್ ತಾರೀಖು 17ರಲ್ಲು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋ ಮತ್ತು ಕೋಠಿಗಳಲ್ಲಿ ಪನಾರೆ ಜಿನಸಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

| ನಂಬರು. | ಡಿಪೋ ಯಾ ಕೋಠಿ ಹೆಸರು. | ಹರಾಜು ತಾರೀಖು. | ಹರಾಜು ಮಾಡಿಸಲ್ಪಡುವ ಆಫಿಸರ ಹೆಸರು. | ಪನಾರೆ ಜಿನಸಿ. | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | | | ಅಳಲಿಕಾಯಿ. | | ಜೀನುಮಣ್ಣು. | | ಜೀನುಮೇಣ. | | ಸಾರಗದ ಕೊಂಬು. | | ಕಿಲಿಕಾಯಿ. | | ಎಸಳಿ ಅರಗು. | | ದುರ್ಯ್ಯೂಂ ಅರಗು. | |
| | | | | ಮಣ. | ಪೌಂಡ್ | ಮ. | ಪೌ | ಮ | ಪೌ | ಮ. | ಪೌ | ಮ. | ಪೌ | ಮ. | ಪೌ | ಮ. | ಪೌ |
| 1 | ಮೈಸೂರು ವುಡಿಯಾರ್ಡು. | 2—5—04 | ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು. | 2,423 | 7 | 9 | 17 | 8 | 27 | 11 | 24 | 97 | .... | .. | .. | .... | .. |
| 2 | ಶ್ರೀರಂಗಪಟ್ಟಣದಕೋಠಿ | 3—5—04 | | 1,678 | .... | 1 | 26 | 1 | 22 | .... | .... | .... | .... | 44 | .. | .... | 7 |
| 3 | ಚಾಮರಾಜನಗರದ ಡಿಪೋ. | 5—5—04 | ಚಾಮರಾಜನಗರದ ರೇಂಜ್ ಆಫಿಸರವರು. | 2,000 | .. | .... | .. | .... | .. | .... | .. | .... | .. | .... | .. | .... | .. |
| 4 | ಗುಂಡ್ಲು ಡಿಪೋ ... | 7—5—04 | ಗುಂಡ್ಲುಪೇಟೆ ಡಿಪೋ | 4,000 | .... | 1 | 26 | 6 | 27 | 1 | 5 | .. | .... | .... | .. | .... | .... |
| 5 | ಹುಣಸೂರು ಕೋಠಿ. | 9—5—04 | ಹುಣಸೂರು ಡಿಪೋ | 1,794 | 21 | .... | .. | .... | .. | .... | .... | .. | .. | .... | .. | .. | .... |

ಪರತ್ತು:—1887ನೆ ಇಸವಿ ಜೂ 18ನೆ ತಾರೀಖಿನ ಮೈಸೂರು ಗೆಜೆಟ್ಟು 287–288ನೆ ಪೇಜುಗಳಲ್ಲಿ ಪ್ರಯಿಧು ಆಗಿರುವ 1887ನೆ ಇಸವಿ 11ನೆ ಜೂ ತಾರೀಖಿನ ಮೈಸೂರು ಫಾರೆಸ್ಟ್ ಇಲಾಖೆ ಇನ್‌ಸ್ಪೆಕ್ಟರ್‌ರವರ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.